ನಡೆಯಿರಿ. ಆಯಿತು, ಆಯಿತು ನೀವು ಸೀಟ್‌ಗೆ ಹೋಗುವುದಿಲ್ಲ ಅದು ನಡೆಸಿರಿ, ಇದು ನಡೆಸಿರಿ ಹಾಗೆ ಮಾಡಿರಿ, ಹೀಗೆ ಮಾಡಿರಿ ಅಂದರೆ ಹೇಗೆ?

(ಸದನದ ಬಾವಿಯಲ್ಲಿದ್ದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

ಶ್ರೀ ಆರಗ ಜ್ಞಾನೇಂದ್ರ : ಸೆಮಿನಾರ್ ವಿಷಯ ಏನು ಸಾರ್ ?

ಅಧ್ಯಕ್ಷರು : ಸೆಮಿನಾರ್ ವಿಷಯ ಏನು ಸಾರ್?

ಅಧ್ಯಕ್ಷರು : ಸೆಮಿನಾರ್‌ಗೆ ಸಂಬಂಧಪಟ್ಟಂತೆ ಅವರಿಗೆ ವಿಷಾದ ವ್ಯಕ್ತಪಡಿಸಿ, ಬೊಕ್ಕೆ ಕೊಟ್ಟು ಕಳುಹಿಸಿಬಿಟ್ಟೆವು. ಇನ್ನೊಂದು ಸಾರಿ ಅದು ಚಳಿಗಾಲದ ಅಧಿವೇಶನದಲ್ಲಿ ಇನ್‌ವೈಟ್ ಮಾಡುತ್ತೇವೆ ಸ್ವಾಮಿ ಅಂತ ಹೇಳಿದೆವು ಏನು ಮಾಡೋದು ಸ್ವಾಮಿ? ಏನು ಈ ತರಹ ಆಗಿ ಹೋಯಿತಲ್ಲಾ. ನಾನು ಹೇಳಿದೆ ಅದರ ನೆಕ್ಟ್ಸ್ ವಿಂಟರ್ ಸೆಷನ್ ನಾವು ಇನ್‌ವೈಟ್ ಮಾಡುತ್ತೇವೆ ಸಾರ್, ದಯಮಾಡಿ ಬನ್ನಿ ಅಂತ ಹೇಳಿದ್ದೇವೆ. ಈಗ ಅರಗ ಜ್ಞಾನೇಂದ್ರರವರು.

ಶ್ರೀ ಎಸ್. ಎಲ್. ಧರ್ಮೇಗೌಡ : ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಕೊಡೋಣ, ಕುಳಿತುಕೊಳ್ಳಿ. ಕೊಡುತ್ತೇನೆ. ಕುಳಿತುಕೊಳ್ಳಿ.

14. ಪ್ರಶ್ನೋತ್ತರಗಳು.

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ತುಂಗಾ ಮೇಲ್ದಂಡೆ ಯೋಜನೆ ಪುನರ್ವಸತಿ.

631 (6484) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುಂಗಾ ಮೇಲ್ದಂಡೆ ಯೋಜನೆ ಕಾಮಗಾರಿ ಯಾವ ಹಂತದಲ್ಲಿದೆ; (ವಿವರ ನೀಡುವುದು);

ಆ. ಈ ಅಣೆಕಟ್ಟೆಯಲ್ಲಿ ಯಾವಾಗ ನೀರು ನಿಲ್ಲಿಸಲಾಗುವುದು ಹಾಗೂ ಇದರಿಂದ ತೀರ್ಥಹಳ್ಳಿ ಮತ್ತು ಎನ್. ಆರ್. ಪುರ ತಾಲ್ಲೂಕಿನ ಎಷ್ಟು ಸಾಗುವಳಿ ಭೂಮಿ, ಅರಣ್ಯ ಹಾಗೂ ವಾಸದ ಮನೆಗಳು ಮುಳುಗಡೆಯಾಗಲಿದೆ;

ಇ. ಇದಕ್ಕೆ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸಲು ಕೈಗೊಂಡ ಕ್ರಮಗಳೇನು;

ಈ. ಈ ಬಗ್ಗೆ ಹೈ ಪವರ್ ಕಮಿಟಿ ಅಸ್ತಿತ್ವದಲ್ಲಿದೆಯೇ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು ಹಾಗೂ ಯಾವಾಗ ರಚಿಸಲಾಗುವುದು;

ಉ. ಮುಳುಗಡೆ ಆಗುವ ಪ್ರದೇಶದಲ್ಲಿ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿರುವ ಹಾಗೂ ಬಗರ್ ಹುಕುಂ ಸಾಗುವಳಿ ಜಮೀನಿಗೆ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಲು ಎನು ಕ್ರಮ ಕೈಗೊಳ್ಳಲಾಗಿದೆ; (ಮನೆ, ಜಮೀನಿನ ದರ ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರ ಪರವಾಗಿ)

ಅ. ತುಂಗಾ ಮೇಲ್ದಂಡೆ ಯೋಜನೆಗಾಗಿ ಶಿವಮೊಗ್ಗ ತಾಲ್ಲೂಕು ಗಾಜನೂರು ಸಮೀಪ ತುಂಗಾ ನದಿಗೆ ಅಡ್ಡಲಾಗಿ ಹಾಲಿ ತುಂಗಾ ಅಣೆಕಟ್ಟಿನ ಕೆಳಗಡೆ 100 ಮೀ. ದೂರದಲ್ಲಿ ನಿರ್ಮಿಸುತ್ತಿರುವ ಹೊಸ ಡ್ಯಾಂ ಕಾಮಗಾರಿಯು ಮುಕ್ತಾಯದ ಹಂತದಲ್ಲಿರುತ್ತದೆ. ತುಂಗಾ ಮೇಲ್ದಂಡೆ ಯೋಜನೆಯ ಮುಖ್ಯ ಕಾಲುವೆಯ ಪಂಕ್ತೀಕರಣ

244 ಕಿ. ಮೀ. ವರೆಗೆ ಅನುಮೋದಿಸಲಾಗಿರುತ್ತದೆ. ಸರಪಳಿ 0.00 ಕಿ. ಮೀ.ನಿಂದ 174 ನೇ ಕಿ. ಮೀ. ವರೆಗೆ ಮುಖ್ಯ ನಾಲೆಯ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ. 174 ಹಾಗೂ 1 ಮತ್ತು 2ನೇ ವಿತರಣಾ ನಾಲೆಗಳ ಕಾಮಗಾರಿಗಳು ಸಹ ಪ್ರಗತಿಯಲ್ಲಿರುತ್ತವೆ. 193ನೇ ಕಿ. ಮೀ.ವರೆಗಿನ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ನಡೆದಿದ್ದು ಸದ್ಯದಲ್ಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಈ ಯೋಜನೆಯನ್ನೂ 2007ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಅ. ಈಗಾಗಲೇ ಅಣೆಕಟ್ಟೆಯ ಕ್ರೆಸ್ಟ್ ಲೆವೆಲ್‌ವರೆಗೆ ನೀರನ್ನು ನಿಲ್ಲಿಸಲಾಗಿದೆ. ಆದರೆ ಕ್ರೆಸ್ಟ್ ಗೇಟುಗಳನ್ನು ಮುಚ್ಚಿ ಪೂರ್ಣ ಪ್ರಮಾಣದ ನೀರನ್ನು ನಿಲ್ಲಿಸುವ ಕಾರ್ಯಕ್ರಮವನ್ನು ಜೂನ್ 2006ಕ್ಕೆ ಹಮ್ಮಿ ಕೊಳ್ಳಲಾಗಿದೆ.

ಮುಳುಗಡೆಯ ವಿವರಗಳು ಈ ಕೆಳಗಿನಂತಿವೆ : ಸಾಗುವಳಿ ಭೂಮಿಗೆ ಸಂಬಂಧಿಸಿದಂತೆ, ತೀರ್ಥಹಳ್ಳಿ ತಾಲೂಕಿನ ಲಿಂಗಾಪುರ (23ಎ12ಗುಂ), ಕಣಗಾಲಕೊಪ್ಪ(64ಎ33ಗುಂಟೆ) ಹಾಗೂ ಬೊಮ್ಮನಹಳ್ಳಿ (2ಎ16ಗುಂಟೆ) ಸೇರಿದಂತೆ 3 ಗ್ರಾಮಗಳ ಜಮೀನು ಭಾದಿತವಾಗುತ್ತದೆ. ಹಾಗೂ ಎನ್. ಆರ್. ಪುರ ತಾಲ್ಲೂಕಿನ ಮುತ್ತಿನಕೊಪ್ಪ (32ಎ29ಗುಂಟೆ) ಹಾಗೂ ಕೆ. ಕಣಬೂರು ಗ್ರಾಮ (2ಎ07ಗುಂಟೆ) ಸೇರಿದಂತೆ 2 ಗ್ರಾಮಗಳ ಜಮೀನುಗಳು ಭಾದಿತವಾಗುತ್ತದೆ. ಒಟ್ಟು 126 ಎಕರೆ 22 ಗುಂಟೆ ಇರುತ್ತದೆ.

2. ಅರಣ್ಯ ಭೂಮಿಗೆ ಸಂಬಂಧಿಸಿದಂತೆ, 427.29 ಹೆಕ್ಟೇರ್ ಅರಣ್ಯ ಭೂಮಿ ಮುಳುಗಡೆಯಾಗುತ್ತದೆ.

3. ಯಾವುದೇ ವಾಸದ ಮನೆಗಳು ಮುಳುಗಡೆಯಾಗುವುದಿಲ್ಲ. ಆದರೂ ಹಿನ್ನೀರಿನಿಂದ ತೀರ್ಥಹಳ್ಳಿ ತಾಲೂಕು ಲಿಂಗಾಪುರ ಗ್ರಾಮದಲ್ಲಿ ಸುಮಾರು 193 ಹಾಗೂ ಕಣಗಾಲ ಕೊಪ್ಪ ಗ್ರಾಮದಲ್ಲಿ 12 ಒಟ್ಟಾರೆ 205 ಕಟ್ಟಡಗಳು ಭಾದಿತವಾಗಬಹುದೆಂದು ಅಂದಾಜು ಮಾಡಲಾಗಿದೆ.

ಇ. ಸಾಗುವಳಿ ಜಮೀನುಗಳಿಗೆ ಹಾಗೂ ಕಟ್ಟಡಗಳ ಮೌಲೀಕರಣಕ್ಕೆ ಸಂಬಂಧಿಸಿದಂತೆ ಪರಿಹಾರ ಪ್ರಕ್ರಿಯೆಯ ಪ್ರಸ್ತಾವನೆಗಳು ಅವಾಡ್ ಹಂತದಲ್ಲಿರುತ್ತದೆ. ಕಟ್ಟಡಗಳಿಗೆ ಸಂಬಂಧಿಸಿದಂತೆ ಪುನರ್ವಸತಿ ಸಲಹಾ ಸಮಿತಿಯ ಶಿಫಾರಸ್ಸಿನಂತೆ ಕ್ರಮ ಕೈಗೊಳ್ಳುವ ಸಲುವಾಗಿ ಶಿವಮೊಗ್ಗ ತಾಲ್ಲೂಕ್ ನಿಧಿಗೆ ಹೊಳಲಿ ಮಂಚೇನಹಳ್ಳಿ ಗ್ರಾಮದಲ್ಲಿ ಪುನರ್‌ವಸತಿ ಕೇಂದ್ರವನ್ನು ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಲಾಗುತ್ತಿದೆ. ಈ ಸಂತ್ರಸ್ಥರಿಗೆ ಪುನರ್ವಸತಿ ಕೇಂದ್ರದಲ್ಲಿ ಸೌಲಭ್ಯಗಳನ್ನು ಒದಗಿಸುವ ಸಂಬಂಧ ರೂ. 11.40 ಕೋಟಿಗಳಿಗೆ ಪ್ಯಾಕೇಜ್ ರೂಪಿಸಲಾಗಿದೆ.

ಈ. ಈ ಹಿಂದಿನ ಸರ್ಕಾರದ ಆದೇಶ ಸಂಖ್ಯೆ ಆರ್. ಡಿ. 44 ಆರ್. ಇ. ಹೆಚ್. 2001 ದಿ : 18.10.2001 ರಲ್ಲಿ ರಚಿಸಿದ ಹೈ ಪವರ್ ಕಮಿಟಿ ಈಗ ಅಸ್ತಿತ್ವದಲ್ಲಿರುವುದಿಲ್ಲ. ಹೊಸದಾಗಿ ಹೈ ಪವರ್ ಕಮಿಟಿ ರಚಿಸುವ ವಿಷಯವು ಕಂದಾಯ ಇಲಾಖೆಗೆ ಸಂಬಂಧಿಸಿದೆ.

ಉ. ಪುನರ್ವಸತಿ ಸಲಹಾ ಸಮಿತಿಯ ಶಿಫಾರಸ್ಸಿನಂತೆ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿಸಿಕೊಂಡಿರುವವರಿಗೆ ನಿವೇಶನಗಳ ಮೌಲ್ಯ ಹೊರತು ಪಡಿಸಿ ಕಟ್ಟಡಗಳಿಗೆ ಸವಕಳಿ ಇಲ್ಲದೆ ಮೌಲೀಕರಣ ಮಾಡಿ ಸಹಾಯಧನವಾಗಿ ಅನುಗ್ರಹ ಅನುದಾನ (Exgratia) ಪಾವತಿಸುವ ಬಗ್ಗೆ ಮತ್ತು ಮುಳುಗಡೆ ಆಗುವ ಪ್ರದೇಶದಲ್ಲಿ ಬಗರ್ ಹುಕುಂ ಜಮೀನುಗಳಿಗೆ ಅಥವಾ ಅನಧಿಕೃತವಾಗಿ ಸಾಗುವಳಿಯಲ್ಲಿರುವ ಜಮೀನಿಗೆ ಸಲಹಾ ಸಮಿತಿಯ ಶಿಫಾರಸ್ಸಿನಂತೆ ಅಧಿಕೃತ ಸಾಗುವಳಿ ಜಮೀನುಗಳಿಗೆ ನೀಡಲ್ಪಡುವ ಪರಿಹಾರದ ಮೂರನೇ ಎರಡು ಭಾಗದಷ್ಟು ಮೊಬಲಗನ್ನು ಅನುಗ್ರಹ ಅನುದಾನವಾಗಿ ಪಾವತಿಸುವ ಕುರಿತು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ಕೇಳಿ ಸಮಾಧಾನದಿಂದ. ಗಲಾಟೆ ಮಾಡಬೇಡಿ.

ಶ್ರೀ ಆರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ. ಈ ತುಂಗಾ ಮೇಲ್ದಂಡೆ ಯೋಜನೆಯಲ್ಲಿ ನನ್ನ ಕ್ಷೇತ್ರದ ತೀರ್ಥಹಳ್ಳಿ ತಾಲ್ಲೂಕಿನ ಭಾಗಗಳು ಕೆಳಗಡೆ ನೀರಿಗೋಸ್ಕರ ಮುಳುಗಡೆಯಾಗುತ್ತವೆ. ಡ್ಯಾಂ ಕಟ್ಟಿ ಮುಗಿಸಿ ಈಗಾಗಲೇ ಒಂದು ವರ್ಷವಾಗಿದೆ. ನೀರು ನಿಂತಿದೆ. ಡ್ಯಾಂನ್ನು ಸುಮಾರು 15 ಅಡಿ ಎರಿಸಿದ್ದಾರೆ. ಇವತ್ತು ಪ್ರವಾಹ ಬಂದು ನನ್ನ ತೀರ್ಥಹಳ್ಳಿ ತಾಲ್ಲೂಕಿನ ಸುಮಾರು 34 ಗ್ರಾಮಗಳು ನೀರಿನಲ್ಲಿ ಮುಚ್ಚಿಹೋಗಿದೆ. ನೀವು ಒಂದು ಪೈಸೆ ಕಾಂಪನ್‌ಸೇಷನ್ ಕೊಡಲಿಲ್ಲ. ಇನ್ನೂ ಕೂಡ 4(1) ನೋಟಿಫಿಕೇಷನ್ ಆಗಲಿಲ್ಲ. ಇದ್ಯಾವ ಪರಿಸ್ಥಿತಿ? ನಾವು ಮುಳುಗಿ, ತ್ಯಾಗ ಮಾಡುವಂಥ ನಮಗೆ, ನಮ್ಮನ್ನು ಈ ರೀತಿ ನೆಗ್ಲೆಕ್ಟ್ ಮಾಡುತ್ತೀರಿ. ನಮ್ಮನ್ನು ಕತ್ತಲೆಯಲ್ಲಿಟ್ಟು ಸರ್ಕಾರದವರು ಡ್ಯಾಂ ಕಟ್ಟಿಸುತ್ತೇವೆಂದು ಹೇಳಿದರೆ ಏನು ಹುಡುಗಾಟದ ವಿಚಾರವೆ? ಈ ಸಾರಿ ಜಮೀನಿನಲ್ಲಿ ನಾಟಿ ಮಾಡುವ ಹಾಗಿಲ್ಲ. ಕಳೆದ ವರ್ಷದಿಂದ ನಾಟಿ ಮಾಡುವ ಪರಿಸ್ಥಿತಿಯಲ್ಲಿಲ್ಲ. ಅವರಿಗೆ ಸಾಲ ತೆಗೆದುಕೊಳ್ಳಲಿಕ್ಕೆ ಆಗುತ್ತಾ ಇಲ್ಲ. ಎಲ್ಲಾ ಬ್ಯಾಂಕುಗಳಿಗೆ ಬರೆದುಬಿಟ್ಟಿದ್ದಾರೆ. ನಮ್ಮ ಆರ್‌ಟಿಸಿ ಮೇಲೆ ಇದು ಇರಿಗೇಷನ್ ಡಿಪಾರ್ಟ್‌ಮೆಂಟ್ ಜಮೀನು ಅಂತ ಹೇಳಿ ಖಾತೆ ಬಂದು ಬಿಟ್ಟಿದೆ. ಹಾಗಾಗಿ, ನಮ್ಮ ರೈತರಿಗೆ ಸಾಲ ಕೊಡುವುದಿಲ್ಲ, ಕ್ರಾಪ್ ಲೋನ್‌ಗಳನ್ನು ಕೊಡುವುದಿಲ್ಲ ಸಹಕಾರಿ ಸಂಘದಲ್ಲಿ ಸಾಲ ಕೊಡುವುದಿಲ್ಲ ಇಂಥ ಒಂದು ಪರಿಸ್ಥಿತಿಯಲ್ಲಿ ಅತಂತ್ರಕ್ಕೆ ದೂಡಿ ಡ್ಯಾಂ ಕಟ್ಟಿ ನೀರು ನಿಲ್ಲಿಸಿದ್ದೀರಿ. ಇವತ್ತು ನಮಗೆ ಕಾಂಪನ್‌ಸೇಷನ್ ಕೊಡುವುದಿಲ್ಲ. ರೀಹ್ಯಾಬಿಲಿಟೇಷನ್ ಕೊಡುವುದಿಲ್ಲ. ಇವತ್ತು ಮಂಡಗದ್ದೆಯಲ್ಲಿರತಕ್ಕಂಥ ಮನೆಗಳನ್ನು ಸ್ಥಳಾಂತರ ಮಾಡದೆ ಅವು ಇವತ್ತು ಮುಳುಗಿವೆ. ಜನ ಒಂದು ರೀತಿ ನಾಯಿ, ನರಿಗಳ ರೀತಿ ಬೆಟ್ಟದ ಮೇಲೆ ಹೋಗಿ ಪೀಟಿಂಗ್ ಮಾಡುಗಳಲ್ಲಿ ಕುಳಿತುಕೊಂಡಿದ್ದಾರೆ. ಈ ಪರಿಸ್ಥಿತಿ ಏಕೆ ತರುತ್ತಿದ್ದೀರಿ? ಸರ್ಕಾದವರಿಗೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರೆ, ರೀಹ್ಯಾಬಿಲಿಟೇಷನ್ ಕೊಡುವುದಕ್ಕಾಗುವುದಿಲ್ಲವೆಂದರೆ ನಿಲ್ಲಿಸಬೇಕು. ಇಲ್ಲ, ಡ್ಯಾಂ ಕಟ್ಟುವುದರೊಳಗಾಗಿ ಪುನರ್‌ವಸತಿ ಮತ್ತು ಪರಿಹಾರದ ಹಣವನ್ನು ಕೊಟ್ಟು ಡ್ಯಾಂಗಳನ್ನು ಕಟ್ಟಬೇಕಾಗುತ್ತದೆ. ಇದೊಂದು ತಮ್ಮ ತಾಲ್ಲೂಕಿನಲ್ಲಿ ದೊಡ್ಡ ದುರಂತ. ದಯವಿಟ್ಟು ಇದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ (ಸಹಕಾರ ಸಚಿವರು) (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ನಾನು ಒಪ್ಪಿಕೊಳ್ಳುತ್ತೇನೆ. ಡ್ಯಾಂ ಒಂದು ಕಡೆಯಾದಾಗ, ಯಾವುದೇ ಒಂದು ದೊಡ್ಡ ಯೋಜನೆಯಾದಾಗ, ಪುನರ್ ವಸತಿಗೆ ಪ್ರಾಮುಖ್ಯತೆ ಕೊಡಬೇಕಾಗುತ್ತದೆ. ಸರ್ಕಾರ ಕೊಟ್ಟಿದೆ. ಈ ಅಪ್ಪರ್ ತುಂಗಾ ಕಾರ್ಯಕ್ರಮ ಪ್ರಾರಂಭವಾಗಿದ್ದು 199192ನೇ ಇಸವಿಯಲ್ಲಿ. ಇವತ್ತು ಡ್ಯಾಂ ಕಂಪ್ಲೀಟ್ ಆದರೂ ಸಹಿತ ಈ ಜಮೀನು ಅವರು ಹೇಳಿದ ಹಾಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ 126 ಎಕರೆ 22 ಗುಂಟೆ ಜಮೀನು ಸರ್ಕಾರ ಆಕ್ವೈರ್ ಮಾಡತಕ್ಕಂಥದ್ದು ಈಗಾಗಲೇ 6(1) ನೋಟಿಫಿಕೇಷನ್ ಪ್ರೋಸಿಡಿಂಗ್ ನಡೆಯುತ್ತಿದೆ. ಅದರ ಪ್ರಕಾರ ಮುಳುಗಡೆಯಾಗತಕ್ಕದು 193 ಮನೆಗಳು ಲಿಂಗಾಪುರದಲ್ಲಿ, 12 ಮನೆಗಳು ಕಣಗಾಲ ಕೊಪ್ಪದಲ್ಲಿ ಅವು ಸಹ ಅಲ್ಲಿಂದ ಸ್ಥಳಾಂತರ ಮಾಡಬೇಕು. ಈ ಮಂಚೇನಹಳ್ಳಿ ಸಡೆ ಇವರಿಗೆ ರೀಹ್ಯಾಬಿಲಿಟೇಟ್ ಮಾಡಬೇಕು. ಎಂದು ಶಿವಮೊಗ್ಗ ಡೆವಲಪ್‌ಮೆಂಟ್ ಅಥಾರಿಟಿ ಕಡೆ ಮಾತನಾಡಿ ಒಂದೂವರೆ ಕೋಟಿ ರೂಪಾಯಿ ಜಮಾ ಆಗಿದೆ. ನಾನು ಮಾನ್ಯ ಸದಸ್ಯರಿಗೆ ಸರ್ಕಾರದ ಪರವಾಗಿ ಭರವಸೆ ಕೊಡುತ್ತಿದ್ದೇನೆ, ಲ್ಯಾಂಡ್ ಅಕ್ವಿಜಿಷನ್ ಅದಷ್ಟು ಬೇಗನೆ ಕಂಪ್ಲೀಟ್ ಮಾಡಿ ಕಾಂಪನ್‌ಸೇಷನ್ ಕೊಡುವ ವ್ಯವಸ್ಥೆ ಮಾಡುತ್ತೇವೆ. 2 ಜನ ಆಫೆಕ್ಟ್ ಆಗಿದ್ದಾರೆ. ಅವರಿಗೆ ರೀಹ್ಯಾಬಿಲಿಟೇಷನ್ ಮಾಡುವ ಕೆಲಸವನ್ನು ಆದಷ್ಟು ಬೇಗನೆ ಆಗುತ್ತದೆಂದು ಸರ್ಕಾರದ ಪರವಾಗಿ ಭರವಸೆಯನ್ನು ಕೊಡುತ್ತೇನೆ.

ಶ್ರೀ ಡಿ. ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ಎನ್. ಆರ್. ಪುರ ತಾಲ್ಲೂಕಿನ ಮುತ್ತಿನಕೊಪ್ಪ, ಕಡಬೂರು ಆ ಎಲ್ಲಾ ಗ್ರಾಮಗಳು ಮುಳುಗಡೆಯಾಗುತ್ತವೆ. ಊರಿನಿಂದ ಬೆಳಗ್ಗೆಯಿಂದ ಬರುವ ಫೋನ್‌ಗಳನ್ನು ಮುಟ್ಟಲಿಕ್ಕೆ ಸಾಧ್ಯವಿಲ್ಲ. ಪೂರ್ತಿ ಮುಳುಗಡೆಯಾಗಿ ಹೋಗಿದ್ದೇವೆ, ಏನು ಮಾಡುವುದೆಂದು ಕೇಳುತ್ತಾರೆ. ಇಲ್ಲಿ ಇವರು ಹೇಳುತ್ತಾರೆ, ಸಿದ್ದವಿರುವಂಥ ಡ್ಯಾಂಗೆ ಗೇಟ್ ಹಾಕಲಿಕ್ಕೆ ಇನ್ನೂ ಹೈ ಪವರ್ ಕಮಿಟಿ ಮಾಡಿಲ್ಲ. ಹೈ ಪವರ್ ಕಮಿಟಿ ಮಾಡದೆ, ಅದಕ್ಕೆ ಲ್ಯಾಂಡ್ ರೇಟ್ ಹೇಗೆ ಫಿಕ್ಸ್ ಮಾಡುತ್ತಾರೆ ಗೊತ್ತಿಲ್ಲ. ಜೊತೆಯಲ್ಲಿ, ಇವರು ಹೇಳುತ್ತಾರೆ, ಯಾರು ಬಗರ್ ಹುಕುಂ ಮಾಡಿಕೊಂಡಿದ್ದಾರೆ, ಅವರಿಗೆ ಜಮೀನಿನ ಮೂರನೇ ಒಂದು ಭಾಗದ ಬೆಲೆ ಕೊಡುತ್ತೇವೆನ್ನುತ್ತಾರೆ. ಅವರು ಎಲ್ಲಿಗೆ ಹೋಗಬೇಕು? ಎಲ್ಲಿ ಬದುಕಬೇಕು? ಎನು ಮಾಡಬೇಕು? ಎಷ್ಟೋ ವರ್ಷಗಳಿಂದ ಇದ್ದಾರೆ ಅಲ್ಲಿ. ನೀವು ಅದಕ್ಕೆ ಸರಿಯಾದ ರೀತಿ ಬೆಲೆ ಕಟ್ಟಿ, ಅವರಿಗೆ ಹಣ ಕೊಟ್ಟು ಅವರನ್ನು ಒಂದು ಕಡೆ ರೀಹ್ಯಾಬಿಲಿಟೇಷನ್ ತೋರಿಸಿಕೊಟ್ಟರೆ ಅವರು ಸಂತೃಪ್ತಿಯಾಗಿ ಬದುಕುತ್ತಾರೆ. ಸರ್ಕಾರ ಇದರ ಕಡೆ ಗಮನಹರಿಸಬೇಕು. ಫರ್ಸ್ಟ್, ಹೈ ಪವರ್ ಕಮಿಟಿ ಮಾಡಿ, ಅದಕ್ಕೆ ಒಂದು ಪವರ್ ಕೊಟ್ಟು, ಅಸ್ತಿತ್ತಕ್ಕೆ ತೆಗೆದುಕೊಂಡು ಬಂದು ಕೊಡಿ. ಹೈ ಪವರ್ ಕಮಿಟಿ ಇಲ್ಲವೆಂದು ಹೇಳಿ ನಿಮ್ಮದೇ ಉತ್ತರದಲ್ಲಿದೆ. ಜೊತೆಯಲ್ಲಿ, ಅಧಿಕೃತ ಜಮೀನಿಗೆ ಬೆಲೆ ಎಷ್ಟು? ಅನಧಿಕೃತಕ್ಕೆಷ್ಟು ಎಂದು ಹೇಳುತ್ತೀರಿ. ನಮ್ಮ ಲೆಕ್ಕಚಾರದಲ್ಲಿ ಯಾರ್ಯಾರು ಎಲ್ಲೆಲ್ಲಿ ಬದುಕುತ್ತಿದ್ದಾರೆ, ಅದು ಅವರದು ಅಧಿಕೃತ. ಅವರಿಗೆ ಅದೇ ಜಮೀನಿಗೆ ಬೆಲೆ ಕೊಡಿ. ಆಮೇಲೆ, ಅವರೇನು ಅಡಿಕೆ ಗಿಡ ಮಾಡಿದ್ದಾರೆ, ತೋಟ ಮಾಡಿದ್ದಾರೆ, ಕಾಡು ಮರಗಳನ್ನು ಬೆಳೆದಿದ್ದಾರೆ, ಆ ಎಲ್ಲಾ ಮರಗಳಿಗೆ ಸರಿಯಾದ ರೀತಿಯ ಬೆಲೆಯನ್ನು ಕೊಡಬೇಕೆಂದು ಹೇಳಿ ನಾನು ಸರ್ಕಾರವನ್ನು ಒತ್ತಾಯ

ಮಾಡುತ್ತೇನೆ. ಇದನ್ನು ಶೀಘ್ರಗತಿಯಲ್ಲಿ ಮಾಡಬೇಕು. ಇಲ್ಲದಿದ್ದರೆ, ಆ ರೈತ ಅಲ್ಲಿ ಸಾಯುತ್ತಾನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಾನು ಒಪ್ಪಿಕೊಳ್ಳುತ್ತೇನೆ, ರಿಹ್ಯಾಬಿಲಿಟೇಷನ್ ಕಮಿಟಿ ಅಲ್ಲ, ಈಗಾಗಲೇ ಪುನರ್ ವಸತಿ ಸಮಿತಿ ಮಾಡುವುದರ ಬಗ್ಗೆ ಸರ್ಕಾರಕ್ಕೆ ಪ್ರಸ್ತಾನೆ ಬಂದಿದೆ. ಆದಷ್ಟು ಬೇಗನೆ ಪುನರ್‌ವಸತಿ ಸಮಿತಿ ರಚನೆ ಸರ್ಕಾರ ಮಾಡುತ್ತದೆ. ಈ ಜಮೀನನ್ನು ಆವಾರ್ಡ್ ಮಾಡುವುದು ರೀಹ್ಯಾಬಿಲಿಟೇಷನ್ ಕಮಿಟಿ ಆಗಿಲ್ಲ. ಅದು ಕಂದಾಯ ಇಲಾಖೆಯಿಂದ ಆಗುತ್ತದೆ, ಈಗಾಗಲೇ ಪ್ರಪೋಸಲ್ ಕಂದಾಯ ಇಲಾಖೆಗೆ ಬಂದಿದೆ, ಅದು ನ್ಯಾಯ ಬದ್ಧವಾಗಿ ಅಡಿಕೆ ಮರ, ತೆಂಗಿನ ಮರ, ಇದ್ದರೂ ಸಹ ತೋಟಗಾರಿಕೆ ಇಲಾಖೆಯಿಂದ ಅದಕ್ಕೂ ವ್ಯಾಲ್ಯೂವೇಷನ್ ಆಗುತ್ತದೆ. ಆದರೆ ಕೆಲವು ಸಾರಿ ಅತಿ ಕ್ರಮೇಣ ಜಮೀನು ಇದ್ದರೆ, ಅಂಥ ಸಮಯದಲ್ಲಿ ಸರ್ಕಾರದ ಬೇರೆ ಪಾಲಿಸಿ ಇದೆ. ಅದು ಎಕ್ಸ್‌ಗ್ರೇಷಿಯಾ ಕೊಡಬೇಕು ಮತ್ತೊಂದು ಕೂಡ ಬೇಕು, ಆದರೆ ಒಂದು ಮಾತು ಹೇಳುತ್ತೇನೆ, ಯಾರ ಜಮೀನು ಮುಳುಗಡೆ ಆಗುತ್ತದೆ ಯಾರ ಮನೆ ಮುಳುಗಡೆ ಆಗುತ್ತದೆ ಅವರಿಗೆ ನ್ಯಾಯಬದ್ಧವಾದ ಪರಿಹಾರ ಕೊಡುವ ವ್ಯವಸ್ಥೆ ಸರ್ಕಾರ ಮಾಡುತ್ತದೆ. ಈಗಾಗಲೇ 11.4 ಕೋಟಿ ರೂ. ರಿಹ್ಯಾಬಿಲಿಟೇಷನ್ ಪ್ಯಾಕೇಜ್ ನಮ್ಮ ಕಂದಾಯ ಇಲಾಖೆಗೆ ಬಂದು ಮುಟ್ಟಿದೆ. ಹೀಗಾಗಿ ಯಾರು ಜಮೀನು ಕಳೆದುಕೊಳ್ಳುತ್ತಾರೆ, ಯಾರು ಜಮೀನು ಅತಿಕ್ರಮಣ ಮಾಡಿದ್ದಾರೆ. ಹಲವಾರು ವರ್ಷಗಳಿಂದ ಇರಬಹುದು, 1020 ವರ್ಷಗಳಿಂದ ಜಮೀನು ಮಾಡುತ್ತಿರಬಹುದು. ಅವರೆಲ್ಲರ ಸಮಸ್ಯೆ ಗಮನಕ್ಕೆ ತೆಗೆದುಕೊಂಡು ಸಮಾನಂತರವಾಗಿ ಸರ್ಕಾರ ನಿರ್ಣಯ ಮಾಡುತ್ತದೆ ಅವರಿಗೆ ಸಹಾಯ ಮಾಡುತ್ತದೆ ಎನ್ನುವಂಥ ಭರವಸೆ ಕೊಡುತ್ತೇವೆ.

ಅಧ್ಯಕ್ಷರು : ಆಯಿತು, ಅವರು ಹೇಳಿದ್ದರಲ್ಲಾ, ಈಗ ಏನೆಂದರೆ, ಜಲಸಂಪನ್ಮೂಲ ಸಚಿವರ ಪರವಾಗಿ ಅವರು ಉತ್ತರ ಹೇಳುತ್ತಿದ್ದಾರೆ, ಆದ್ದರಿಂದ ನೀವು ಸಹಕರಿಸಬೇಕು.

ಶ್ರೀ ಆರಗ ಜ್ಞಾನೇಂದ್ರ : ನಮಗೆ ಇದನ್ನು ತಡೆ ಹಿಡಿದು ನಾಳೆ ಉತ್ತರ ಕೊಡಿಸಿದರೆ ಆಗಬಹುದು. ತಾವು ನಾಳೆ ಕೊಡಿಸುತ್ತೇವೆಂದರೆ ನಾನು ಕುಳಿತುಬಿಡುತ್ತೇನೆ. ಏಕೆಂದರೆ, ಅವರ ಪರಿಸ್ಥಿತಿಯು ನಮಗೆ ಅರ್ಥವಾಗುತ್ತದೆ, ಅವರೇನು ಬರೆದು ಕೊಟ್ಟಿದ್ದಾರೆ ಅವರು ಅಷ್ಟು ಮಾತ್ರ ಹೇಳಬೇಕಾಗುತ್ತದೆ.

ಅಧ್ಯಕ್ಷರು : ಆದುದರಿಂದ ಇನ್ನೊಂದು ಸಾರಿ ನೀವು ಕೇಳಿ.

ಶ್ರೀ ಆರಗ ಜ್ಞಾನೇಂದ್ರ : ತಾವು ದಯಮಾಡಿ ಇಲ್ಲಿ ಹೇಳಿ ಸಾರ್. ನಾಳೆ ಅಥವಾ ನಾಡಿದ್ದು ಸದನ ಮುಗಿಯುತ್ತದೆ. ನಮ್ಮನ್ನು ಹೇಳುವವರು ಕೇಳುವವರು ಇಲ್ಲ. ಹೊಸ ಸರ್ಕಾರ ಬಂದು 14 ತಿಂಗಳು ಆಯಿತು. ಇನ್ನು ತುಂಗಾ ಮೇಲ್ದಂಡೆ ಹೈ ಪವರ್ ಕಮಿಟಿಯನ್ನು ಸರ್ಕಾರ ರಚನೆ ಮಾಡಲಿಲ್ಲ. ನಮ್ಮ ಪರಿಸ್ಥಿತಿಗಳೇನಾಗುತ್ತದೆ ಸಾರ್? ನೀರಿನಲ್ಲಿ ಇವತ್ತು ಅವರು ಅಲ್ಲಿ ಮುಳುಗಿಕೊಂಡಿದ್ದಾರೆ ನಾನು ಊರಿಗೆ ಹೋಗುವ ಪರಿಸ್ಥಿತಿ ಇಲ್ಲ, 11 ಕೋಟಿ ಚಿಲ್ಲರೆ ಪ್ಯಾಕೇಜ್ ಎಂದು ಹೇಳುತ್ತಾರೆ, ಎಲ್ಲಾ ಪ್ಯಾಕೇಜ್ ಘೋಷಣೆ ಮಾಡಿದ್ದರಲ್ಲಾ ಈ ರೀತಿ ಇದೊಂದು ಪ್ಯಾಕೇಜ್. ಹನ್ನೊಂದು ಪೈಸೆ ಕೊಡಲಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಸದಸ್ಯರು ನಿಮಗೆ ಏನು ಬೇಕಾಗಿದೆ ಹೇಳಿ, ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, ಸರ್ಕಾರ ಏನು ಲ್ಯಾಂಡ್ ಕಾಂಪನ್‌ಸೇಷನ್ ಕೊಡಬೇಕು, ರಿಹ್ಯಾಬಿಲಿಟೇಷನ್ ಮಾಡಬೇಕು, ಅದರ ಬಗ್ಗೆ ಸರ್ಕಾರ ಮಾಡುತ್ತದೆ, ರೀಹ್ಯಾಬಿಲಿಟೇಷನ್ ಕಮಿಟಿ ರಚನೆ ಮಾಡಬೇಕು, ಅದು ಒಪ್ಪಿಕೊಂಡಿದ್ದೇನೆ, ಮಾಡಿಕೊಡುತ್ತೇವೆಂದು ಹೇಳಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ : ಹಾಗಾದರೆ ಡೇಟ್ ಹೇಳಿ ಸಾರ್. ಯಾವತ್ತು ನೀವು ಹಣ ಕೊಡುತ್ತೀರಿ? ಯಾವತ್ತು ರೀಹ್ಯಾಬಿಲಿಟೇಷನ್ ಮಾಡುತ್ತೀರಿ?

ಶ್ರೀ ಆರ್. ವಿ. ದೇಶಪಾಂಡೆ : ನೋಡಿ ನನಗೆ ಕೊಟ್ಟ ಮಾಹಿತಿ ಪ್ರಕಾರ, ಈ ಸ್ಟೋರೇಜ್ ಆಗಬೇಕಾದರೆ 2006 ರವರೆಗೆ ಟೈಂ ಇದೆ, ತಾವು ಇದನ್ನು ಅರ್ಥ ಮಾಡಿಕೊಳ್ಳಿ. ಇದರ ಅರ್ಥ, ಲ್ಯಾಂಡ್ ಅಕ್ವಿಜೇಷನ್ ನಾವು 2006ರ ರವರೆಗೆ ಕಾಯಬೇಕೆಂದಲ್ಲ. ಈಗಾಗಲೇ 6(1) ನೋಟಿಫಿಕೇಷನ್ ಬಂದಿದೆ, ಇಮೀಡಿಯೇಟ್ಲಿ ಅವಾರ್ಡ್ಸ್ ಮಾಡಿ ನ್ಯಾಯಬದ್ಧವಾಗಿ ಪರಿಹಾರ ಕೊಡುವಂಥ ವ್ಯವಸ್ಥೆ ಸರ್ಕಾರ ಮಾಡುತ್ತದೆ. ಎರಡನೇಯದು, ಈಗಾಗಲೇ ಶಿವಮೊಗ್ಗ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ 1.5 ಕೋಟಿ ರೂ. ತುಂಬಿದ್ದೇವೆ ಅಲ್ಲಿ ಯಾರು ಜನ ಮನೆ ಕಳೆದು ಕೊಳ್ಳುತ್ತಾರೆ. ಅವರಿಗೆ ರೀಹ್ಯಾಬಿಲಿಟೇಷನ್ ಮಾಡಬೇಕೆಂದು ನಿರ್ಣಯ ಆಗಿದೆ. ಅದೂ ಸಹ ಜಾರಿಗೆ ತರುತ್ತೇವೆ. ಅವರು ಮತ್ತೊಂದು ಪ್ರಸ್ತಾಪ ಮಾಡಿದರು. ರೀಹ್ಯಾಬಿಲಿಟೇಷನ್ ಕಮಿಟಿ ಇಲ್ಲ, ಬರುವ ಎಂಟು ದಿವಸದೊಳಗೆ ರೀಹ್ಯಾಬಿಲಿಟೇಷನ್ ಕಮಿಟಿ ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಸಚಿವರು ತಾವು ಹಿರಿಯರು ಇದ್ದೀರಿ, ನಾರ್ಥ್ ಕೆನರಾದಿಂದ ಬಂದಿದ್ದೀರಿ, ಈ ಮುಳುಗಡೆ ಸಮಸ್ಯೆ ಎನೆಂಬುದು ತಮಗೆ ಕಾಳಿಯಲ್ಲಿ ಜ್ವಲಂತವಾಗಿ ತಾವು ನೋಡಿದ್ದೀರಿ, ಇದರಲ್ಲಿ ಅನುಭವಪಟ್ಟಂತವರು ಇದ್ದೀರಿ, ತಾವು ನನಗೆ ಹೇಳಿ, ಇವತ್ತೇ ನೀವು ರೀಹ್ಯಾಬಿಲಿಟೇಷನ್ ಅಮೌಂಟ್ ಕೊಟ್ಟರೂ ಕೂಡ ಅವರು ಮನೆ ಕಟ್ಟಲಿಕ್ಕೆ ಎಷ್ಟು ದಿವಸ ಬೇಕು ಸಾರ್? ಒಂದು ವರ್ಷದಿಂದ ಎರಡು ವರ್ಷ ಬೇಕಾಗುತ್ತದೆ. ಹೋಗಿ ಮನೆ ಕಟ್ಟಿಕೊಂಡು ನಂತರ ಅವನು ಅಲ್ಲಿಂದ ಶಿಫ್ಟ್ ಆಗಬೇಕಾಗುತ್ತದೆ. ನಾಡಿದ್ದು ನೀರು ನಿಲ್ಲಿಸಿಕೊಂಡು ಆಮೇಲೆ ನಿನಗೆ ಕೊಡುತ್ತೇನೆಂದರೆ ಏನು ಗತಿ? ನಮಗೆ ಚಕ್ರಾದಲ್ಲಿ ವರಾಹಿದಲ್ಲಿ ಮಾಡಿದಂತೆ, 11 ಕೋಟಿ ರೂಪಾಯಿ ಚಿಲ್ಲರೆ ಪ್ಯಾಕೇಜ್ ಹೇಳುತ್ತಾರೆ, ಶಿವಮೊಗ್ಗ ನಗರಾಭಿವೃದ್ಧಿ ಪ್ರಾದಿಕಾರ ಒಂದು ಪೈಸದ ಕೆಲಸ ಮಾಡಲಿಲ್ಲ. ಬೇಕಾದರೆ ತಾವು ಬಂದು ನೋಡಿ. ನಗರಾಭಿವೃದ್ಧಿ ಪ್ರಾಧಿಕಾರ ತಾವು ಕೊಟ್ಟಂಥ ಒಂದೆರಡು ಕೋಟಿ ರೂ. ಹಣ ಏನು ಇರಿಗೇಷನ್ ಡಿಪಾರ್ಟ್‌ಮೆಂಟ್‌ನಿಂದ ಕೊಟ್ಟಿದ್ದೀರಿ, ಬೇರೆ ಕೆಲಸಕ್ಕೆ ಹಾಕಿಕೊಂಡಿದೆ ಒಂದು ಪೈಸೆಯನ್ನೂ ನಮ್ಮ ಮುಳುಗಡೆ ರೈತರಿಗೆ ಒದಗಿಸಿದ್ದಾರಾ? ಅಲ್ಲಿ ನಿವೇಶನಗಳನ್ನು ರಚನೆ ಮಾಡಲಿಲ್ಲ, ಪರಿಸ್ಥಿತಿ ಏನು? ಚುನಾಯಿತ ಪ್ರತಿನಿಧಿಗಳಾಗಿ ನಾವು ಹೇಗೆ ಸಾರ್ ಅಲ್ಲಿ ಕೆಲಸ ಮಾಡಬೇಕು? ಬೇರೆ ಜನಗಳ ಕುಡಿಯುವ ನೀರಿಗಾಗಿ ಅಲ್ಲಿನ ಜನ ತ್ಯಾಗ ಮಾಡುತ್ತಿದ್ದಾರೆ...

ಅಧ್ಯಕ್ಷರು : ಆಯಿತು ಉತ್ತರ ಹೇಳುತ್ತಾರೆ.

ಶ್ರೀ ಆರ್. ವಿ. ದೇಶಪಾಂಡೆ : ಡಿಬೇಟ್ ಮಾಡುವಂಥ ವಿಷಯವಲ್ಲ. ತಾವು ಏನು ಹೇಳುತ್ತೀರಿ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನಮಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಅನುಭವ ಇದೆ. ಕೈಗಾ ಪ್ರಾಜೆಕ್ಟ್ ನೋಡಿದ್ದೇವೆ, ಕಾಳಿ, ನೋಡಿದ್ದೇವೆ ಸೀಬರ್ಡ್ ನೋಡಿದ್ದೇವೆ, ನಮ್ಮಷ್ಟು ಪ್ರಾಜೆಕ್ಟ್ ಬೇರೆ ಎಲ್ಲಿಯೂ ಬಂದಿಲ್ಲ. ಹೈಡಲ್ ಪ್ರಾಜೆಕ್ಟ್ ಇದೆ. ಶಿವಮೊಗ್ಗ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆ ರೀಹ್ಯಾಬಿಲಿಟೇಷನ್‌ನಲ್ಲಿ ಸಾಕಷ್ಟು ಸಫರ್ ಆಗಿದೆ. ನಾನು 20 ವರ್ಷದಿಂದ ಅದೇ ಕೆಲಸ ಮಾಡುತ್ತಿದ್ದೇನೆ. ನಮಗೆ ಗೊತ್ತು. ಏನು ಮಾಡಿದರೂ ಸಮಾಧಾನ ಮಾಡಲಿಕ್ಕೆ ಕಷ್ಟ ಇದೆ, ಏಕೆಂದರೆ ಅವನ ಹೊಲ ಮನೆ, ಬಿಟ್ಟು ಹೋಗುವಾಗ, Government has to be ligeral. I fully agree with you. Our officers have to liberal. ನಾವು Liberal outlook, ತೆಗೆದುಕೊಂಡು ನೀವು ಹೇಳಿದ ಹಾಗೆ, ಮನೆ ಕೊಡಲಿಕ್ಕೆ ಸಮಯ ಬೇಕಲ್ಲಾ, 2006ರ ತನಕ We cannot wait. I quite agree with you. ನಾನು ನಿಮಗೆ ಆಶ್ವಾಸನೆ ಕೊಡುತ್ತೇನೆ, ಆದಷ್ಟು ಬೇಗನೆ ಪರಿಹಾರ ಕೊಡುವ ವ್ಯವಸ್ಥೆ, ರೀಹ್ಯಾಬಿಲಿಟೇಷನ್ ಕೊಡುವ ವ್ಯವಸ್ಥೆ, ಒಂದು ವೇಳೆ ಮಂಡಗದ್ದೆಯಲ್ಲಿ ಕೆಲಸ ಮಂದಗತಿಯಲ್ಲಿ ನಡೆಯುತ್ತಿದ್ದರೆ, ತಕ್ಷಣ ಕೆಲಸ ಮಾಡುವುದಕ್ಕೆ ಆದೇಶ ಕೊಡುತ್ತೇವೆ.

ಅಧ್ಯಕ್ಷರು : ಈಗ ಮಾನ್ಯ ಕೆ. ಜಿ. ಬೋಪಯ್ಯನವರ ಪ್ರಶ್ನೆ ತಡೆಹಿಡಿಯಲಾಗಿದೆ, ಮಾನ್ಯ ಚರಂತಿ ಮಠ ವೀರಣ್ಣ ಚಂದ್ರಶೇಖರಯ್ಯನವರದ್ದು 15 ದಿವಸಗಳ ಕಾಲ ಮಾನ್ಯ ಮುಖ್ಯಮಂತ್ರಿಗಳು, ಕಾಲಾವಕಾಶ ಕೇಳಿದ್ದಾರೆ.

ಶ್ರೀ ಕೆ. ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಕನಿಷ್ಟ ನಾಳೆ ಬೆಳಿಗ್ಗೆಯಾದರೂ ಇದಕ್ಕೆ ಉತ್ತರ ಕೊಡಿಸಬೆಕೆಂದು ಕೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ಹೇಳಿದ್ದಾರೆ. ಮಂತ್ರಿಗಳು ಬಂದರೆ ಅವರನ್ನು ಕೇಳೋಣ.

ಶ್ರೀ ಕೆ. ಜಿ. ಬೋಪಯ್ಯ : ನಮ್ಮ ಪ್ರಶ್ನೆಗಳು ಹೀಗೆ ಆಗಿವೆ, ಯಾವುದೇ ಪ್ರಶ್ನೆ ಕೇಳಿದರೂ ಅದು ತಡೆಹಿಡಿಯಲಾಗಿದೆ. ಎಂದು ಹೇಳಲಾಗುತ್ತಿದೆ. ನಾನು ಕಳೆದ ಸಲ ಕೊಡಗು ಪ್ಯಾಕೇಜ್‌ಗೆ ಕೇಳಿದ್ದೆ. ಎರಡು ಅಧಿವೇಶನದಲ್ಲೂ ಕೇಳಿದರೂ ತಡೆಹಿಡಿಯಲಾಗಿದೆ ಎನ್ನುವ ಉತ್ತರ ಆದರೆ ನಾವು ಪ್ರಶ್ನೆ ಕೇಳುವ ಉದ್ದೇಶವಾದರೂ ಏನು?

ಅಧ್ಯಕ್ಷರು : ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ನಿಮ್ಮ ನಿಮ್ಮ ಮನೆಗಳಿಗೆ ಉತ್ತರ ಕಳುಹಿಸಬೇಕೆಂದು ನಾನು ಸೂಚನೆ ಕೊಡುತ್ತೇನೆ. ಈಗ ಇಲ್ಲಿ ಹಿರಿಯ ಮಂತ್ರಿಗಳು ಇದ್ದೀರಿ, ತಾವು ದಯಮಾಡಿ ಎಲ್ಲರಿಗೂ ಹೇಳಬೇಕು,

ಶ್ರೀ ಪಿ. ಜಿ. ಆರ್. ಸಿಂಧ್ಯಾ : ನಾನೇ ಈಗ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು : ಅನೇಕ ಇಲಾಖೆಗಳಿಂದ ಉತ್ತರವೇ ಬರುವುದಿಲ್ಲವೆಂದರೆ ಹೇಗೆ? ಈ ಪ್ರಶ್ನೋತ್ತರ ಏಕೆ ಇರಬೇಕು? ಅರ್ಥವಾಗುವುದಿಲ್ಲ. . ಇನ್‌ಕನ್‌ವೀನಿಯೆಂಟ್ ಕೊಶ್ಚನ್‌ಗೆ ಅಧಿಕಾರಿಗಳು ಸುಮ್ಮನೆ ತಳ್ಳಿಕೊಂಡು ಹೋಗುತ್ತಿದ್ದಾರೆ ಎಂದು ಆರೋಪ ಇದೆ

ಅದಕ್ಕೆಲ್ಲಾ ಅವಕಾಶ ಕೊಡಬಾರದು ದಯಮಾಡಿ ಎಲ್ಲರಿಗೂ ಅವರವರ ಪ್ರಶ್ನೆಗಳಿಗೆ ಉತ್ತರಗಳನ್ನು ಕಳುಹಿಸಿ. . .

ಶ್ರೀ ಆರ್. ಅಶೋಕ್ : 60 ಪರ್ಸೆಂಟ್ ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಉತ್ತರಗಳನ್ನು ಇನ್‌ಕನ್‌ವೀನಿಯೆಂಟ್ ಪ್ರಶ್ನೆ ಎನ್ನುವಂಥಾದ್ದು ಸರ್ಕಾರ ಅದನ್ನು ನುಂಗಲೇಬೇಕಾಗುತ್ತದೆ. ಮತ್ತೆ ಅದು ಇನ್‌ಕನ್‌ವೀನಿಯೆಂಟ್ ಇದ್ದರೂ ಮಾನ್ಯ ಸದಸ್ಯರುಗಳ ಹಕ್ಕು ಇದೆ. We cannot hide anything. ಟ್ರಾನ್ಸ್‌ಫರೆನ್ಸಿ ಆಕ್ಟ್ ಕರ್ನಾಟಕದಲ್ಲಿದೆ. ಅದರಿಂದ, ಯಾರು ಬೇಕಾದರೂ ಸಹಿತ ಸುದ್ದಿಗಳನ್ನು ತರಿಸಿಕೊಳ್ಳಬಹುದು. We cannot hide ಮಾನ್ಯ ಬೋಪಯ್ಯನವರು ಕೇಳಿರತಕ್ಕಂಥ ಪ್ರಶ್ನೆ. ಇದು ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಂಬಂಧಿಸಿದ್ದು. ಇದು 15 ವರ್ಷಗಳಿಂದ ಈ ಪ್ರಶ್ನೆಯನ್ನೂ ಎಲ್ಲರೂ ಸಹಿತ ಕೇಳಿಕೊಂಡು ಬಂದಿದ್ದಾರೆ. This is not from the contingency fund. This is from public contribution and public sector contribution fund. This is the discretionary of the Chief Minister. Inspite of that ಕೆಲವು ಸಂದರ್ಭದಲ್ಲಿ ಈ ತರಹ ಇರುತ್ತದೆ, ಮಾನ್ಯ ಚರಂತಿಮಠ್ ಅವರು ಕೇಳಿರತಕ್ಕಂಥ ಪ್ರಶ್ನೆ. ರವರು ಕೇಳಿರತಕ್ಕಂಥ ಪ್ರಶ್ನೆ ಬಹಳ ಚೆನ್ನಾಗಿದೆ. ಆದರೆ, ಏನಾಗಿದೆ ಎಂದರೆ, ಗ್ರೀನ್‌ವೆನ್‌ಷನ್ ಸೆಲ್, ಇಲ್ಲಿ ಒಬ್ಬ ಐಎಎಸ್ ಸೀನಿಯರ್ ಆಫೀಸರ್ ಕೆಲಸ ಮಾಡುತ್ತಿದ್ದಾರೆ. He has to write to all the Deputy Commissioners and get correct information. ಈ ಸದನಕ್ಕೆ ಮಾಹಿತಿ ಕೊಡುವಾಗ ಒಂದು ಚೂರು ಎಳ್ಳಷ್ಟು ಅಸತ್ಯ ನುಡಿದರೂ ಸಹಿತ ಪ್ರಿವಿಲೇಜ್ ಮೋಷನ್ ಮೂವ್ ಮಾಡಬಹುದು, ಆಫೀಸರ್ಸ್‌ಗೆ ನಾವು ಹೋಲ್ಡ್ ಅಪ್ ಮಾಡುತ್ತೇವೆ. ಅದರಿಂದಾಗಿ, 20 ದಿವಸದೊಳಗೆ ಇದನ್ನೆಲ್ಲಾ ಮಾಹಿತಿ ತೆಗೆದುಕೊಳ್ಳುವುದು ತಪ್ಪಾಗುತ್ತದೆ, ತಡವಾಗುತ್ತದೆ ಎನ್ನುವ ದೃಷ್ಟಿಯಿಂದ ಹೊರತು ಸರ್ಕಾರಕ್ಕೆ ಯಾವುದೇ ವಿಚಾರವನ್ನು ಸಹಿತ ಗುಪ್ತವಾಗಿಡಬೇಕು ಎನ್ನತಕ್ಕಂಥ ಉದ್ದೇಶ ಇಲ್ಲ ಎಂದು ನಾನು ಮೊದಲನೆಯದಾಗಿ ಸ್ಪಷ್ಟಪಡಿಸಿ, ತಾವು ಏನು ಆದೇಶ ಕೊಟ್ಟಿದ್ದೀರಿ, ಆದೇಶವನ್ನು ಸರ್ಕಾರ ಶಿರಸಾವಹಿಸಿ ಪಾಲಿಸುತ್ತೇವೆ ಗೌರವಾನ್ವಿತ ಎಲ್ಲಾ ಸದಸ್ಯರುಗಳಿಗೂ ಸಹಿತ ಉತ್ತರವನ್ನು ಕೊಡತಕ್ಕಂಥ ಕೆಲಸವನ್ನು ನಾನು ಮಾಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮಂತ್ರಿಗಳು ಹೇಳಿದರು, ಇದೇನು ಬಹಳಷ್ಟು ಮಾಹಿತಿ ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಿಂದ ಮಾಹಿತಿ ತರಿಸುವಂಥಾದ್ದಲ್ಲ. ಇಲ್ಲಿ ಮುಖ್ಯಮಂತ್ರಿಗಳ ಕಛೇರಿಯಲ್ಲಿಯೇ ಇರುವಂಥಾದ್ದು. ಅವರು ಒಟ್ಟು ಮೊತ್ತ ಎಷ್ಟು ಎನ್ನುವಂಥಾದ್ದು. ಮತ್ತು ಕೊಡಗು ಜಿಲ್ಲೆಗೆ ಸೀಮಿತವಾಗಿ ಅವರು ಕೇಳಿದ್ದಾರೆ. ಎಷ್ಟು ಅರ್ಜಿ ಬಂದಿವೆ? ಅಷ್ಟು ಮಾಹಿತಿಯನ್ನು ನೀವು 1520 ದಿವಸದೊಳಗೆ ಕೊಡುವುದಿಲ್ಲ ಎಂದರೆ, ಇವತ್ತು ಗೌರ್ನಮೆಂಟ್ ಎನ್ನುವುದಕ್ಕೆ ಏನು ಅರ್ಥವಿದೆ? ಎಲ್ಲಾ ಮಾಹಿತಿ ಕಂಪ್ಯೂಟರ್‌ನಲ್ಲಿ ಇರುತ್ತದೆ, ನೀವು ಮನಸ್ಸು ಮಾಡಿದರೆ Within one hour you will get the information. ಆದರೆ ಕೊಡಬಾರದೆಂದು ಮನಸ್ಸಿನಲ್ಲಿ ಬಂದಾಗ ನೀವು ಕೊಡುವುದಿಲ್ಲ. ಇಡೀ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಂದ ಮಾಹಿತಿ ತರುವಂಥ ಪ್ರಶ್ನೆಯೇ ಅಲ್ಲ. ಮಾನ್ಯ

ಬೋಪಯ್ಯನವರದ್ದು, ಮುಖ್ಯಮಂತ್ರಿ ಪರಿಹಾರನಿಧಿಯಿಂದ ಯಾವ್ಯಾವ ಚಿಕಿತ್ಸೆಗೆ ಕೊಡುತ್ತಾರೆ ಎಂದು ಕೇಳಿದ್ದಾರೆ.

ಅಧ್ಯಕ್ಷರು : ಮುಖ್ಯಮಂತ್ರಿಗಳ ಪರಿಹಾರ ನಿಧಿಯದಕ್ಕೆ ಇಲ್ಲಿ ಉತ್ತರಗಳನ್ನು ಹುಡುಕಿದರೂ ಸಾಧ್ಯವಾಗುವುದಿಲ್ಲವೆನ್ನುವ ದೃಷ್ಟಿಯೂ ಇದರಲ್ಲಿ ಇದೆ. ಆ ದೃಷ್ಟಿಯಿಂದ ಹೀಗಾಗಿದೆ.. ನೋಡೋಣ. .

ಶ್ರೀ ಜಗದೀಶ್ ಶೆಟ್ಟರ್ : ಯಾವ್ಯಾವ ಚಿಕಿತ್ಸೆಗೆ ಪರಿಹಾರ ಧನ ಕೊಡುತ್ತೀರಿ ಇಲ್ಲಿಯೇ ಇರುವಂತಹ ಉತ್ತರ ಬಹಳ ಮುಖ್ಯವಾದ ಪ್ರಶ್ನೆ ಇದು, ಇದಕ್ಕೂ ಸರ್ಕಾರ ಉತ್ತರ ಕೊಡುವುದಿಲ್ಲಾವೆಂದರೆ ಮತ್ತೆ ಯಾವ ಪ್ರಶ್ನೆಗೆ ಇವರು ಉತ್ತರ ಕೊಡುತ್ತಾರೆ?

ಅಧ್ಯಕ್ಷರು : ಆಯಿತು ಆಯಿತು ಬಿಡಿ, ಮಾನ್ಯ ದೊಡ್ಡನಗೌಡ ಗುಂಡನಗೌಡ ಪಾಟೀಲರು ತಾವು ಪ್ರಶ್ನೆ ಕೇಳಿ.

ಇಳಕಲ್, ಲಿಂಗಸಗೂರು ಮತ್ತು ಕುಷ್ಟಗಿ ತಾಲ್ಲೂಕು ಗಳಲ್ಲಿ ಗ್ರಾಮೀಣ ಸಾರಿಗೆ.

634 (6597)ಶ್ರೀ ದೊಡ್ಡನ ಗೌಡ ಗುಂಡನ ಗೌಡ ಪಾಟೀಲ್(ಹುನಗುಂದ) : ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಇಳಕಲ್, ಲಿಂಗಸುಗೂರು ಮತ್ತು ಕುಷ್ಟಗಿ ಡಿಪೋಗಳಲ್ಲಿ ಮಂಜೂರಾಗಿರುವ ಮತ್ತು ಚಾಲ್ತಿಯಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು ಹಾಗೂ ಅವು ಯಾವ ಯಾವ ಮಾರ್ಗಗಳಲ್ಲಿ ಸಂಚರಿಸುತ್ತಿವೆ;

ಆ. ಹುನಗುಂದ, ಲಿಂಗಸುಗೂರು ಮತ್ತು ಕುಷ್ಟಗಿ ತಾಲ್ಲೂಕುಗಳ ಅನೇಕ ಹಳ್ಳಿಗಳು ಇಂದಿಗೂ ಸಾರಿಗೆ ಸೌಲಭ್ಯ ಪಡೆದುಕೊಳ್ಳದಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ, ಸರ್ಕಾರದ ಕ್ರಮ ಗಳೇನು;

ಈ. ಇಳಕಲ್, ಕುಷ್ಟಗಿ ಮತ್ತು ಲಿಂಗಸುಗೂರು ಬಸ್ಸು ನಿಲ್ದಾಣಗಳಲ್ಲಿ ಪ್ರಯಾಣಿಕರ ಮೂಲಭೂತ ಸೌಕರ್ಯಗಳು ಸರಿಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ. ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಳ್ಳಲಾಗುವ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) ಪರವಾಗಿ ಶ್ರೀ ಆರ್. ವಿ. ದೇಶಪಾಂಡೆ

ಅ. ಇಳಕಲ್ 84
ಲಿಂಗಸುಗೂರು 99
ಕುಷ್ಟಗಿ 64

ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ. ಲಿಂಗಸುಗೂರು ಮತ್ತು ಕುಷ್ಟಗಿ ತಾಲ್ಲೂಕುಗಳಲ್ಲಿ ರಸ್ತೆ ಸರಿಯಿಲ್ಲದ ಕೆಲವು ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ.

ಇ. ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆ ಸಂಪರ್ಕ ಒದಗಿಸಿದ ತಕ್ಷಣ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು.

ಈ. ಮೂಲಭೂತ ಸೌಕರ್ಯಗಳನ್ನು ಸುಸ್ಥಿತಿಯಲ್ಲಿಡಲಾಗಿದೆ.